**PW_6**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
ಚಿತ್ರದುರ್ಗ
ಸಿ.ಸಿ.**1649/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಅನ್ನಪೂರ್ಣ | PW:6 |
| ಗಂಡನ ಹೆಸರು | - | ವರದರಾಜ | CW:7 |
| ವಯಸ್ಸು | - | 55 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - | ಗೃಹಿಣಿ | ದಿ: 26/09/2025 |
| ವಾಸ | - | ಜೋಗಿಮಟ್ಟಿ ರಸ್ತೆ,ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಚಾಸಾ.1, 4, 5 ಮತ್ತು 6 ರವರು ನಮ್ಮ ಮನೆಯ ಹತ್ತಿರ ಇರುತ್ತಾರೆ ಅವರ ಪರಿಚಯ ಅಷ್ಟಾಗಿ ಇರುವುದಿಲ್ಲ ಆದರೆ ಸ್ವಲ್ಪ ಇದೆ. ಆರೋಪಿತರು ಕೂಡ ನಮ್ಮ ಸುತ್ತ ಮುತ್ತ ಇದ್ದಾರೆ. ಆರೋಪಿತರು ಮತ್ತು ಚಾಸಾ.1 , 4 ಮತ್ತು 5 ರವರ ನಡುವೆ ಆದ ಗಲಾಟೆ ನಾನು ನೋಡಿಲ್ಲ ಮತ್ತು ಕೇಸಿನ ಯಾವುದೇ ವಿಚಾರ ನನಗೆ ಗೊತ್ತಿಲ್ಲ. ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ**

2. ಚಾಸಾ.1 , 4 ರವರ ತಮ್ಮ 1 ನೇ ಆರೋಪಿ ಹಾಗೂ 1 ನೇ

**PW_6**

ಆರೋಪಿಯ ಹೆಂಡತಿಯಾದ 2 ನೇ ಆರೋಪಿಯ ನಡುವೆ ಆಗಾಗ ಸಣ್ಣ ಪುಟ್ಟ ವಿಚಾರಕ್ಕೆ ಜಗಳ ಮಾಡಿ ನೀವು ಮನೆಬಿಟ್ಟು ಹೋಗಿ ತಿರುಗಾಡಿ ಅಂತ ಆರೋಪಿತರು ಚಾಸಾ.1,2,4 ರವರಿಗ ಹೇಳುತಿದ್ದರು ಎಂದರೆ ಸರಿಯಲ್ಲ. ದಾವಣಗೆರೆಯಲ್ಲಿದ್ದ ಚಾಸಾ.5 ರವರು ಚಿತ್ರದುರ್ಗದ ಏಕನಾಥೇಶ್ವರಿ ಜಾತ್ರೆಗೆಂದು ಚಿತ್ರದುರ್ಗಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಿಃ15.04.2022 ರಂದು ಬೆಳಗ್ಗೆ 7 ಗಂಟೆ ಸಮಯದಲ್ಲಿ ಚಾಸಾ.5 ರವರು ಅವರ ಮನೆ ಎದುರುಗಡೆ ನಿಂತುಕೊಂಡಿದ್ದಾಗ ನಾನು ಅವರನ್ನು ಕಾಪಿ ಕುಡಿಯಲು ಕರೆದಾಗ ಅವರು ಕಾಪಿ ಕುಡಿಯುತಿದ್ದ ಸಮಯದಲ್ಲಿ ಚಾಸಾ.1 ರವರ ಮನೆ ಹತ್ತಿರ 1 ನೇ ಆರೋಪಿ ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತಿದ್ದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿಯು ಬೈದಾಡುತ್ತಾ ಕೆಳಗೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ.1 ರವರು ತೊಟ್ಟಿದ್ದ ನೈಟಿಯನ್ನು ಹಿಡಿದೆಳೆದಾಡಿ ಅವರ ತಲೆಕೂದಲನ್ನು ಹಿಡಿದು ಎಳೆದು ಕೈಕಾಲುಗಳಿಂದ ಚಾಸಾ.1 ರವರ ಎದೆಗೆ , ತಲೆಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮನೆ ಒಳಗೆ ಇದ್ದ ಚಾಸಾ.4 ರವರು ಚಾಸಾ.1 ರವರನ್ನು ಬಿಡಿಸಲು ಹೋದಾಗ 2 ನೇ ಆರೋಪಿಯು ಚಾಸಾ.4 ರವರನ್ನು ಹಿಡಿದು ಎಳೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸ.4 ರವರ ತಲೆಕೂದಲು ಹಿಡಿದು ಎಳೆದಾಡುತ್ತಿರುವಾಗ ಚಾಸಾ.5 ರವರು ಭಯದಿಂದ ಜೋರಾಗಿ ಕಿರುಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ನಾನು ಮತ್ತು ಚಾಸಾ.6 ರವರು ಗಲಾಟೆ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ.1 ಮತ್ತು 4 ರವರಿಗೆ ನೀವು ಮನೆ ಬಿಟ್ಟು ಹೋಗದಿದ್ದರೆ ನಿಮ್ಮನ್ನು ಸಾಯಿಸಿಬಿಡುತ್ತೇವೆ ಎಂದು ಪ್ರಾಣಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ.4 ಮತ್ತು 1 ರವರು ಯಾವುದೋ ಆಟೋದಲ್ಲಿ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾಸಾ.1 ರವರು ದೂರು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಆರೋಪಿಯ ಮಗನಾದ ಪವನ ಎಂಬುವ ಹುಡುಗನ ಮೇಲೆ ದೂರು ಕೊಟ್ಟಿರುತ್ತಾರೆ ಎನ್ನುವ ವಿಚಾರ ನನಗೆ

**PW_6**

ಗೊತ್ತಿರುವುದಿಲ್ಲ. ಗಲಾಟೆ ಸಮಯದಲ್ಲಿ ಪವನನು ಅಲ್ಲಿ ಇರಲಿಲ್ಲ ಎಂದರೆ ಸರಿ. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ದಿಃ06.05.2022 ರಂದು ಈಗ ಓದಿ ಹೇಳಲಾದ ರೀತಿಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು. ಆರೋಪಿ ಹಾಗೂ ಚಾಸಾ.1 ಮತ್ತು 4 ರವರ ನಡುವೆ ಗಲಾಟೆ ಸಮಯದಲ್ಲಿ ನಾನು ಹಾಜರಿದ್ದು ಕಣ್ಣಾರೆ ನೋಡಿದ್ದರೂ ಸಹ ನಿಪಿ.7 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಅನುಕೂಲ ಆಗಲಿ ಅಂತ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**